

ಹಂಗೇರಿಯ ಪ್ರಸಿದ್ಧ ಕವಿ ಜೋಸೆಫ್ ಅಟ್ಟಿಲಾ ಪ್ರತಿಮೆ

# ಪ್ರತಿಮೆಗಳ ನಗರ ಬುಡಾಪೆಸ್ಟ್

■ ಡಿ.ಜಿ. ಮಲ್ಲಿಕಾರ್ಜುನ

ನಗರವನ್ನು ಹೀಗೂ ಸುಂದರವಾಗಿಸಬಹುದೇ ಎಂದು ಮೆಚ್ಚಿಕೊಳ್ಳುವಂತೆ ಬುಡಾಪೆಸ್ಟ್ ನಗರವನ್ನು ಹಲವಾರು ಸುಂದರ ಪ್ರತಿಮೆಗಳಿಂದ ಸಿಂಗರಿಸಿದ್ದಾರೆ. ದೊಡ್ಡ ಗಾತ್ರದಿಂದ ಹಿಡಿದು ಪುಟಾಣಿ ಗಾತ್ರದವರೆಗೆ ಇರುವ ಈ ಪ್ರತಿಮೆಗಳನ್ನು ಹುಡುಕುತ್ತಾ, ಅವುಗಳ ಉದ್ದೇಶ ಮತ್ತು ಇತಿಹಾಸವನ್ನು ಅರಿಯುತ್ತಾ, ದೇಶ ಹಾಗೂ ನಗರವನ್ನು ಅರ್ಥೈಸಿಕೊಳ್ಳಬಹುದು.

**‘Kolodko mini statues map’, ‘Tiny Statues of Budapest walking tour’** ಅಥವಾ **‘Budapest Statue Walk’** ಎಂದು ನೆಟ್‌ನಲ್ಲಿ ಹುಡುಕಿದರೆ, ಎಲ್ಲ ಪ್ರತಿಮೆಗಳ ನಕ್ಷೆ ಸಿಗುತ್ತದೆ. ಪ್ರತಿಮೆಗಳ ಮೂಲಕ ನಾವು ನಗರದ ಪ್ರವಾಸ ಮಾಡಬಹುದು. ಛಾಯಾಗ್ರಾಹಕರಿಗೆ ಅಥವಾ ಶಿಲ್ಪಕಲಾಪ್ರಿಯರಿಗೆ ಇದೊಂದು ವಿಶೇಷ ಅನುಭವ ಕೊಡುತ್ತದೆ.

ಹಂಗೇರಿ ದೇಶದ ರಾಜಧಾನಿ ಬುಡಾಪೆಸ್ಟ್, ಡಾನೂಬ್ ನದಿಯ ಎರಡೂ ದಂಡೆಯ ಮೇಲೆ ಹಬ್ಬಿದೆ. ನದಿಯ ಒಂದು ದಡದಲ್ಲಿರುವ ಬುಡಾ ಮತ್ತು ಮತ್ತೊಂದು ದಡದ ಮೇಲಿರುವ ಪೆಸ್ಟ್ ಪಟ್ಟಣಗಳನ್ನು 1831ರಲ್ಲಿ ಸೇತುವೆ ಮೂಲಕ ಸೇರಿಸಿ ಬುಡಾಪೆಸ್ಟ್ ಎಂದು ಕರೆದರು. ಯೂರೋಪಿನ ಸುಂದರ ನಗರಗಳಲ್ಲಿ ಒಂದಾದ ಬುಡಾಪೆಸ್ಟ್, ದೇಶದ ಪ್ರಮುಖ ರಾಜಕೀಯ, ಸಾಂಸ್ಕೃತಿಕ, ವಾಣಿಜ್ಯ, ಉದ್ಯೋಗ, ಸಾರಿಗೆ ಕೇಂದ್ರವಾಗಿ ಮತ್ತು ಭವ್ಯವಾದ ಕಟ್ಟಡಗಳಿಗೆ, ಪ್ರತಿಮೆಗಳಿಗೆ ಪ್ರಸಿದ್ಧಿ ಪಡೆದಿದೆ.

## ಪುಟ್ಟ ಪುಟ್ಟ ಪ್ರತಿಮೆಗಳು

ಬುಡಾಪೆಸ್ಟ್‌ನ ‘ಪುಟ್ಟ ಪುಟ್ಟ ಪ್ರತಿಮೆಗಳು’ **(tiny statues)** ಎಂಬುದು ಸಾಕಷ್ಟು ಜನಪ್ರಿಯವಾಗಿರುವ, ನಗರವನ್ನು ಸುಂದರವಾಗಿಸುವ ಕಲಾತ್ಮಕ ಯೋಜನೆಯ ಭಾಗವಾಗಿದೆ. ಹಂಗೇರಿಯ ಕಲಾವಿದ ಮಿಹಾಯ್ ಕೊಲೋಡ್ಕೊ **(Mihly Kolodko)** ಈ ಪ್ರತಿಮೆಗಳನ್ನು ರೂಪಿಸಿದ್ದಾರೆ. ಇವರು ಬೃಹತ್ ಶಿಲ್ಪಗಳ ಬದಲಿಗೆ ಸಣ್ಣ ಗಾತ್ರದ, ವಿನೋದಪೂರ್ಣ ಮತ್ತು ಕೆಲವೊಮ್ಮೆ ರಾಜಕೀಯ, ಐತಿಹಾಸಿಕ ಅರ್ಥ ಹೊಮ್ಮಿಸುವ ಪ್ರತಿಮೆಗಳ ಮೂಲಕ ತಮ್ಮ ಕಲೆಯನ್ನು



ಡೊಳ್ಳುಹೊಟ್ಟೆಯ ಪೊಲೀಸಪ್ಪನ ಶಿಲ್ಪ